ಕಡೂರು ಡಿಸ್ಟ್ರಿಕ್ಟ್.

ಇನ್ಸ್ಟಿಹಾರ್.

ಸ|| 1904ನೆ ಇಸವಿ ಜೂಲೈ ತಾರೀಖು 28.

ಚಿಕ್ಕಮಗಳೂರು ತಾಲ್ಲೂಕು ಜಾಗರದ ಹೋಬಳಿ ಪಂಡ್ಯವಳ್ಳಿ ಗ್ರಾಮಕ್ಕೆ 1902-03 ಮತ್ತು 1903-1904ನೆ ಸಾಲಿಗೆ ಚಿಕ್ಕ ಮುದ್ದಯ್ಯ ದೊಡ್ಡ ಮುದ್ದಯ್ಯ ಇವರಿಂದ ಒರಪೇಕಾದ ಕಂದಾಯ ಬಾಕಿಗಾಗಿ ಸದರೀ ಗ್ರಾಮದ ಕಾಫಿ ಸರ್ವೆ ನಂ. 9-116 ಮತ್ತು 55 ಗಳನ್ನು ಚಿಕ್ಕಮಗಳೂರು ತಾಲ್ಲೂಕು ಕಛೇರಿಯಲ್ಲಿ ಅವಲ್ಯರ ರೂಬರೂ ಸ|| 1904ನೆ ಇಸವಿ ಅಕ್ಟೋಬರು ತಾರೀಖು 5ನೆ ದಿವಿ 11 ಘಂಟೆಗೆ ಒಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ.

ಇನ್ನು ಜಾಸ್ತಿ ತಪಶೀಲು ತಿಳಿಯಬೇಕಾದವರು ಇದರ ಹಿಂದಿನವಾರದ ಗೆಜೆಟ್ಟಿನಲ್ಲಿ ಫಾಯಿಷ್ ಆಗಿರುವದನ್ನು ನೋಡಿದರೆ ತಿಳಿಯಲಾಗುತ್ತೆ.

ಎಂ. ನಾರಾಯಣರಾವ್,
ಡೆಪ್ಯೂಟಿ ಕಮಿಷನರ್.

ಬೆಂಗಳೂರು ಡಿವೀಜ್ಞ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ|| 1904 - 1905ನೆ ಇಸವಿ ಅರ್ಜೀ ನಂಬರ್ 43.

ಮೃತಪಟ್ಟ ಸರಾಫ್ ಕೆಂಪಂಣನವರ ಆಸ್ತೀ ವಿಷಯದಲ್ಲಿ

ಅರ್ಜೀದಾರು ಬೆಂಗಳೂರು ನಗರ್ತ ಪ್ಯಾಟೇಲಿರುವ ರಾಮಂಣನ ಮಗ ಸರಾಫ್ ಗೋಪಾಲಯ್ಯ ಮೃತಪಟ್ಟ ಸದರೀ ಸರಾಫ್ ಕೆಂಪಂಣನವರಿಗೆ ತಮ್ಮನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಟರ್ವನಲ್ಲಿ ವಾಸಸ್ಥರಾಗಿ ಮೃತಪಟ್ಟ ಸರಾಫ್ ಕೆಂಪಣ್ಣನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ|| 1901ನೆ ಇಸವಿ 7ನೆ ನಂ. ರೆಗ್ಯುಲೇಷ್ಯನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಪಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ರಾಮಂಣನ ಮಗ ಸರಾಫ್ ಗೋಪಾಲಯ್ಯನವರ ಅರ್ಜಿಯನ್ನು ಸ|| 1904ನೆ ಇಸವಿ ಸೆಪ್ಟಂಬರು ತಿಂಗಳು ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯಾತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸರಾಫ್ ಕೆಂಪಂಣನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಪಡಿಸಿ ಇದೆ.

ಸ|| 1904ನೆ ಇಸವಿ ಆಗಸ್ಟು ತಿಂಗಳು 19ನೆ ತಾರೀಖಿನಲ್ಲಿ ಕೋರ್ಟ್ ಮೊಹರ್ಸಿತಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ|| 1904—1905ನೆ ಇಸವಿ ಅರ್ಜೀ ನಂಬರ್ 60.

ಮೃತಪಟ್ಟ ನೂರ್‌ಜಮಖಾರ್ ಎಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ನೆಲವಂಗಲದಲ್ಲಿ ಇರುವ ಗೌಸ್‌ದಿರ್ ಹುಕ್ಕೇಖಾರ್ ಸಾಹೇಬರು, ಮೃತಪಟ್ಟ ಸದರೀ ನೂರ್‌ಜಮಖಾರ್ ಎಂಬುವರಿಗೆ ತಂದೆ ಆಗಬೇಕೆಂಬ ಹಕ್ಕುದಾರಿ ಮೇಲೆ ನೆಲವಂಗಲದಲ್ಲಿ ವಾಸಸ್ಥರಾಗಿ ಮೃತರಟ್ಟ ನೂರ್‌ಜಮಖಾರ್ ಎಂಬುವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಯನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಪಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗೌಸ್‌ದಿರ್‌ಹುಕ್ಕೇಖಾರ್ ಸಾಹೇಬರ ಅರ್ಜಿಯನ್ನು ಸ|| 1904ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನೂರ್‌ಜಮಖಾರ್ ಎಂಬುವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ|| 1904ನೆ ಇಸವಿ ಆಗಸ್ಟು ತಿಂಗಳು 20ನೆ ತಾರೀಖಿನಲ್ಲಿ ಕೋರ್ಟ್ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಆರ್. ಸುಬ್ರಾಯ ಅಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಬೆಂಗಳೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ|| 1904—1905ನೆ ಇಸವಿ ಮಿ|| ಅರ್ಜೀ ನಂಬರ್ 111.

ಅರ್ಜೀದಾರ ಬೆಂಗಳೂರು ತಾಲ್ಲೂಕು ಯಶವಂತಪುರದ ಹೋಬಳಿ ಕರಿಯಂಣನ ವಾಳ್ಯದಲ್ಲಿ ಇರುವ ತಿಗಳರ ತಿಮ್ಮಪ್ಪ. ಮೈನರಾದ ಕರಿಯಂಣನ ವಾಳ್ಯದಲ್ಲಿ ಇರುವ ಪವತಿ ಮಲ್ಲಪ್ಪನವರ ಮಗ ಮುನಿಸಾಮಿ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಮುನಿಸಾಮಿಗೆ ಚಿಕ್ಕತಂದೆ ಆಗಬೇಕೆಂಬ ಹಕ್ಕಿನಮೇಲೆ ತಿಗಳರ ಮಲ್ಲಪ್ಪ ಎಂಬವನು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿಕೊಟ್ಟು ಇರುತ್ತಾನೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ|| 1904ನೆ ಇಸವಿ ಸೆಪ್ಟಂಬರು ತಾರೀಖು 9ರಲ್ಲು ವೊಕರರು ಮಾಡಿಯಿರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

ಸ|| 1901ನೆ ಇಸವಿ ಆಗಸ್ಟು ತಿಂಗಳು 26ನೆ ತಾರೀಖಿನಲ್ಲಿ ಕೋರ್ಟ್ ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಪಿ. ಸಿಂಗ್ರಾಚಾರ್,
ಸಬ್ ಜಡ್ಜ್.

371

1365

ಮೈಸೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ್ಯ 1904--1905ನೆ ಇಸವಿ ಅರ್ಜೀ ನಂಬರ್ 65.

ಮೃತಪಟ್ಟ ರಾಮುಸ್ವಾಮೈಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಮೈಸೂರು ಕಿಲ್ಲೆ ಮೊಹಲ್ಲಾ ದೇವೀರಾಂಬಾ ಅಗ್ರಹಾರದಲ್ಲಿರುವ ಲಕ್ಷ್ಮಿದೇವಮ್ಮ, ಮೃತಪಟ್ಟ ಸದರೀ ರಾಮು ಸ್ವಾಮೈಯ್ಯನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ನೋಲೆ ಬೆಟ್ಟದಪುರದ ವಾಸಸ್ಥರಾಗಿ ಮೃತಪಟ್ಟ ರಾಮುಸ್ವಾಮೈಯ್ಯ ನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ಯ 1901ನೆ ಇಸವಿ 7ನೆ ರೆಗ್ಯುಲೇಶ್ಯ ಪ್ರಕಾರ ಸರಟಿಫಿಕೇಟ್ ಬ್ಯೂ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸ್ಯ 1904ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮುಸ್ವಾಮೈಯ್ಯ ನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1904ನೆ ಇಸವಿ ಆಗಸ್ಟು ತಿಂಗಳು 20ನೆ ತಾರೀಖಿನಲ್ಲಿ ಕೋರ್ಟು ವೊಹರಿನಿಂದ ನಮ್ಮ ದಸ್ತಖತ್ತೂಡನೆ ಕೊಡೋಣಾಗಿದೆ.

ಟಿ. ಪರಮೇಶ್ವರ ಅಯ್ಯರ್,
ಸಬ್ ಜಡ್ಜ.

ಪ್ಲೇಗು ನೋಟಿಸು.

ತಾರೀಖು 10ನೆ ಆಗಸ್ಟು 1904.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ, ಹಾಸನ ತಾಲ್ಲೂಕು ಗೊರೂರು ಇನ್‌ಸ್ಪೆಕ್ಷನ್ ಲಾಡ್ಜ್ ಪ್ಲೇಗು ರೋಗದಿಂದ ಇನ್‌ಫೆಕ್ಟೆಡ್ ಆಗಿಯು ಮತ್ತು ದುಸರಾ ನೋಟೀಸು ಕೊಡುವ ವರಿಗೂ ಇಳಿದುಕೊಳ್ಳುವದಕ್ಕೆ ಅರ್ಹವಾದ್ದಲ್ಲವಾಗಿಯು ಇದೆ.

ಸಿ. ಎ. ಮಹದೇವ ಶಾಸ್ತ್ರಿ,
ಎಗ್ಜಿಕ್ಯೂಟಿವ್ ಇಂಜಿನಿಯರ್.

ಬೆಂಗಳೂರ್ ಗೌರ್ನಮೆಂಟ್ ಸೆಕ್ರಟ್‌ರಿಲ್ ಬುಕ್ ಡಿಪೋ.

ನೋಟಿಸ್.

ಬ ತಾರೀಖು 1ನೆ ಆಗಸ್ಟು 1904.

1905ನೆ ಸಾಲಿನ ಲೋವರ್ ಸೆಕಂಡರೀ ಟೆಕ್ಸ್‌ಟ್ ಗದ್ಯಭಾಗವು ಈಗ ಮೂರಾಟಕ್ಕೆ ಸಿದ್ಧವಾಗಿರುತ್ತೆಂಬದಾಗಿ ಇದರಿಂದ ತಿಳಿಸಲ್ಪಟ್ಟಿದೆ. ಖರೀದಿ ಪ್ರತಿ ಬಂದಕ್ಕೆ ಅಣೆ 2½ (ಎರಡುವರಾಣೆಗಳು.)

ಎಸ್. ಅಬ್ದುಲ್ ಹೈ, ಕ್ಯೂರೇಟರ್.

ನೋಟಿಸ್.

ತಾರೀಖು 27ನೆ ಆಗಸ್ಟು 1904.

ಚಿಕ್ಕ ಮಂಡ್ಯದ ಚೆನ್ನನ ಮಗ ಬೋರನ ಹೆಸರಿಗೆ ಮಂಡ್ಯದ ಸ್ಟ್ಯಾಂಪುವೆಂಡರು ಸಂಜೀವಯ್ಯನವರ ಬಳಿ ಬಿಕರಿ ಬಿದ್ದಿದ್ದ ನಾಲ್ಕಾಣೆ ಛಾಪಾಕಾಗದ (ಬಂದು) ಬರಿಯದೆ ಇದ್ದದ್ದು ನಂಬಿಗೆ ಮೇಲೆ ನನ್ನಲ್ಲಿ ಸುಮಾರು ಇಪ್ಪತ್ತು ವರುಷದಿಂದ ಬಿದ್ದಿತ್ತು. ಅದನ್ನು ಈಗ್ಯೆ 4 ವರುಷದ ಕೆಳಗೆ ಸಾತನೂರು ಪಟೇಲ ಕಾಳೇಗೌಡನ ಮಗ ಪುಟ್ಟೇಗೌಡ ತೆಕ್ಕೊಂಡುಹೋಗಿ ಅನೇಕಾವರ್ತಿ ರೂ ಬರೂದಲ್ಲಿಯೂ ಮತ್ತು 15—8—04ನೆ ಮಾರ್ಚಿಂ 14ನೆ ನಂಬರು ರಿಜಿಸ್ಟರ್ ನೋಟೀಸು ಮೂಲಕವೂ ಸಹ ತಗಾದೆ ಮಾಡಿದರೂ ಕೊಡದೆ ದಬಾಯಿಸುತ್ತಾನೆ. ಸದರೀ ಕಾಗದದಲ್ಲಿ ಏನಾದರೂ ದಸ್ತೈವಜು ಬರದು ದಾಖಲೆಗೆ ಬಂದರೆ ಸರ್ಕಾರದಲ್ಲಾಗಲಿ ಪ್ರೈವೆಟಿನಲ್ಲಾಗಲಿ ಮಂಜೂರ್ಮಾಡಕೂಡದು.

✓ ಮಂಡ್ಯದ ತಾಲ್ಲೂಕು ಕೋಡ್ಲಹಳ್ಳಿ ಜೊಗ್ಗಿಡನ ಗುರ್ತಿನ ರುಜು.